ನೀತಿಯ ಬಗ್ಗೆ ಚರ್ಚೆ ಮಾಡಿದರು. ಕೇಂದ್ರದ ನೀತಿಯ ಬಗ್ಗೆ ಚರ್ಚೆ ಮಾಡುವುದಕ್ಕೆ ಸಂವಿಧಾನದತ್ತವಾದ ಹಕ್ಕು ಸನ್ಮಾನ್ಯ ಸದಸ್ಯರಿಗೆ ಇದೆ. ಅದನ್ನು ಮೊಟಕು ಮಾಡತಕ್ಕಂಥ ಪ್ರಯತ್ನ ನಾವು ಈ ಕಡೆಯಿಂದ ಮಾಡುವುದಕ್ಕೆ ಸಿದ್ಧರಿಲ್ಲ. ನಾನು ಕೂಡ ಮಾಡತಕ್ಕಂಥ ಪ್ರಯತ್ನ ಅದನ್ನು ಯಾವಾಗಲೂ ಕೂಡ ಮಾಡುವುದಿಲ್ಲ. ಆದರೆ ವಿತನ್ಮಧ್ಯೆ ಕೆಲವು ಆಪಾದನೆಗಳು ಬಂದಾಗ ಮಾತ್ರ ಈ ಕಡೆಯಿಂದ ಅದಕ್ಕೆ ನಾವು ವಿರೋಧವನ್ನು ಸೂಚಿಸಿದ್ದೇವೆ. ಆದರೆ ಆ ವಿರೋಧವನ್ನು ಸೂಚಿಸುವಾಗ ಕೆಲವು ಸಾರಿ ಧ್ವನಿಯಲ್ಲಿ (ಟೋನ್) ಪ್ರೊಸೀಡಿಂಗ್ಸ್‌ನಲ್ಲಿ ನನ್ನ ಮಾತಿನಲ್ಲಿ ಏನಾದರೂ ಆಕ್ಷೇಪಣಾರ್ಹವಾದಂಥ ವಿಚಾರಗಳು ಇಲ್ಲದಿದ್ದರೂ ಕೂಡ ಕೆಲವು ಸಾರಿ ಮಾತುಕತೆ ಚರ್ಚೆ ಮಾಡುವಾಗ ಕೆಲವು ಟೋನ್‌ನಲ್ಲಿ (ಧ್ವನಿ)ಯಲ್ಲಿ ವ್ಯತ್ಯಾಸ ಇರುತ್ತದೆ. ಸನ್ಮಾನ್ಯ ಸದಸ್ಯರಿಗೆ ಪ್ರಾಮಾಣಿಕವಾದಂಥ ವಾದವನ್ನು ಸನ್ಮಾನ್ಯ ಸದಸ್ಯರಾದಂಥ ವಿಕಾಂತಯ್ಯನವರು ಇಲ್ಲಿ ಪ್ರಸ್ತಾವನೆ ಮಾಡಿದ್ದಕ್ಕೆ ನಮ್ಮದು ಏನೂ ಆಪೇಕ್ಷಣೆ ಕೂಡ ಇಲ್ಲ. ಅವರಿಗೆ ನಾನು ಮಾತನಾಡಿದಂಥ ಧ್ವನಿಯಲ್ಲಿ ನಿನ್ನೆ ನಡೆದಂಥ ವಿದ್ಯಮಾನಗಳಲ್ಲಿ ಅವರಿಗೆ ವಿಪರೀತವಾದಂಥ ನೋವಾದಂಥದ್ದು ಖಂಡಿತ. ಆ ಟೋನ್ ಅಥವಾ ನನ್ನ ಧ್ವನಿಯಿಂದ ಅವರಿಗೆ ಏನಾದರೂ ನೋವಾಗಿದ್ದರೆ ನಾನು ವಿಶೇಷವಾಗಿ ಅದರ ಬಗ್ಗೆ ವ್ಯಾಕುಲವನ್ನು ವ್ಯಕ್ತಪಡಿಸುತ್ತೇನೆ. ಮತ್ತು ಸನ್ಮಾನ್ಯ ವಿಕಾಂತಯ್ಯನವರು ಅದರ ಬಗ್ಗೆ ಬೇಸರ ಮಾಡಿಕೊಳ್ಳಬಾರದು ಎಂದು ಹೇಳುತ್ತ ನನಗೆ ಅವರ ಬಗ್ಗೆ ವಿಶೇಷವಾದ ಗೌರವವಿದೆ. I am very sorry if your feelings are hurt.

ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು.

ತೆಂಗಿನ ಮರಕ್ಕೆ ತಗಲಿರುವ ರೋಗವನ್ನು ಹೋಗಲಾಡಿಸುವಿಕೆ

3 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿ ತೆಂಗಿಗೆ ತಗಲಿರುವ ರೋಗವನ್ನು ಹೋಗಲಾಡಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಆ) ಯಾವಯಾವ ಪ್ರದೇಶದಲ್ಲಿ ಎಷ್ಟು ಎಕರೆ ತೆಂಗು ಬೆಳೆಯುವ ಪ್ರದೇಶವು ರೋಗಕ್ಕೆ ತುತ್ತಾಗಿರುವುದು?

ಶ್ರೀ ಎ. ಕೃಷ್ಣಪ್ಪ (ತೋಟಗಾರಿಕೆ ರಾಜ್ಯ ಸಚಿವರು) :

ಅ) ಕರ್ನಾಟಕ ರಾಜ್ಯದಲ್ಲಿ ತೆಂಗಿನ ಬೆಳೆಗೆ ರೋಗ ಯಾವುದೂ ತೀವ್ರವಾಗಿರುವುದು ಕಂಡು ಬಂದಿರುವುದಿಲ್ಲ. ಆದರೆ ಕಪ್ಪುತಲೆ ಹುಳುವಿನ ಭಾದೆ ಅಲ್ಲಲ್ಲೇ ಕೆಲವು ಜಿಲ್ಲೆಗಳಲ್ಲಿ ಕಂಡುಬಂದಿರುತ್ತದೆ. ಈ ಕೀಟ ನಿಯಂತ್ರಣ ಮಾಡಲು ಸರ್ಕಾರವು ಕೆಳಕಂಡ ಕ್ರಮಗಳನ್ನು ಕೈಗೊಂಡಿದೆ.

1. ರಾಜ್ಯದ 10 ಜಿಲ್ಲೆಗಳಲ್ಲಿ 50 ಪ್ರಯೋಗಶಾಲೆಗಳನ್ನು (45 ಸಣ್ಣ ಮತ್ತು 4 ದೊಡ್ಡವು ಜಿಲ್ಲಾ ಪರಿಷತ್ ಯೋಜನೆಯಡಿ ಮತ್ತು ಒಂದು ದೊಡ್ಡದು ರಾಜ್ಯವಲಯದಡಿ) ತೆರೆಯಲಾಗಿದೆ. ಡಿಸೆಂಬರ್ 93ರ ಮಾಹೆವರೆಗೆ 68.82 ಲಕ್ಷ ಪರೋಪಜೀವಿಗಳನ್ನು 4264 ರೈತರುಗಳ ಕೀಟಭಾದೆಯಿಂದ ತೆಂಗಿನ ತೋಟಗಳಲ್ಲಿ ಉಚಿತವಾಗಿ ಬಿಡುಗಡೆ ಮಾಡಲಾಗಿದೆ. ಕೀಟಭಾಧೆ ತೀವ್ರವಾದಾಗ ಹಾಗೂ ಎತ್ತರದ ಮರಗಳಲ್ಲಿ ಕೀಟ ನಿಯಂತ್ರಣ ಮಾಡಲು ಬೇರಿನ ಮೂಲಕ ಕೀಟನಾಶಕದಿಂದ ಉಪಚರಿಸಲು ತಿಳಿಸಲಾಗುತ್ತಿದೆ. ಈ ಯೋಜನೆಯಲ್ಲಿ ಡಿಸೆಂಬರ್ 93ರವರೆಗೆ 1.63 ಲಕ್ಷ ಮರಗಳನ್ನು ಉಪಚರಿಸಲಾಗಿದೆ. ತಲಾ ಫಲಾನುಭವಿಗಳಿಗೆ ಕೀಟನಾಶಕವನ್ನು ಉಚಿತವಾಗಿ ಒದಗಿಸಲಾಗಿದೆ.

2. ತೆಂಗು ಅಭಿವೃದ್ಧಿ ಮಂಡಳಿಯನ್ನು ಸಹಾಯಧನದೊಂದಿಗೆ 3 ಬೃಹತ್ ಪ್ರಮಾಣ ಪರೋಪಜೀವಿ ವೃದ್ಧಿಪಡಿಸುವ ಪ್ರಯೋಗ ಶಾಲೆಗಳನ್ನು ತಿಪಟೂರು, ಉಡುಪಿ ಮತ್ತು ಹೊಸದುರ್ಗಗಳಲ್ಲಿ ಸ್ಥಾಪಿಸಿ ಡಿಸೆಂಬರ್ 93 ಮಾಹೆವರೆಗೆ 25.91 ಲಕ್ಷ ಪರೋಪಜೀವಿಗಳನ್ನು ಕೀಟಭಾಧೆಯಿರುವ 1237 ರೈತರ ತೆಂಗಿನ ತೋಟಗಳಲ್ಲಿ ಉಚಿತವಾಗಿ ಬಿಡುಗಡೆ ಮಾಡಲಾಗಿದೆ.

3. ಅ) ತೆಂಗಿನ ಕಪ್ಪುತಲೆ ಹುಳು ಸಮಗ್ರ ಹತೋಟಿ ಯೋಜನೆ (ರಾಜ್ಯವಲಯ)ಯಡಿ, ಕೀಟಭಾದೆ ತೀವ್ರವಾದಾಗ ಬೇರಿನ ಮುಖಾಂತರ ಸಸ್ಯಾಂತರ ಮಾನೋಕ್ರೋಟೋಪಾಸ್ ಕೀಟನಾಶಕವನ್ನು ಶೇ. 100ರ ರಿಯಾಯಿತಿ ದರದಲ್ಲಿ ಒದಗಿಸಿ 0.72 ಲಕ್ಷ ಮರಗಳನ್ನು ಡಿಸೆಂಬರ್ (93ರ ಅಂತ್ಯದವರೆಗೆ ಉಪಚರಿಸಲಾಗಿದೆ.

ಆ) ರಾಜ್ಯವಲಯದಡಿ 15 ಜಿಲ್ಲೆಗಳಲ್ಲಿ 26 (24 ಸಣ್ಣ ಮತ್ತು 4 ದೊಡ್ಡ) ಪರೋಪಜೀವಿಗಳನ್ನು ವೃದ್ಧಿಪಡಿಸುವ ಪ್ರಯೋಗಶಾಲೆಗಳನ್ನು ಸ್ಥಾಪಿಸಲಾಗಿದೆ. ಈ ಯೋಜನೆಯಡಿ ಡಿಸೆಂಬರ್ 93ರ ಮಾಹೆವರೆಗೆ 40.33 ಲಕ್ಷ ಪರೋಪಜೀವಿಗಳನ್ನು ಕೀಟಭಾದೆಯಿರುವ 3054 ರೈತರ ತೆಂಗಿನ ತೋಟಗಳಲ್ಲಿ ಉಚಿತವಾಗಿ ಬಿಡುಗಡೆ ಮಾಡಲಾಗಿದೆ. ಅಲ್ಲದೇ ನಿರುದ್ಯೋಗಿ ಯುವಕ ಯುವತಿಯರಿಂದ 125ಪ್ರಯೋಗಶಾಲೆಗಳನ್ನು ಸ್ಥಾಪಿಸಿ ಡಿಸೆಂಬರ್ 93ರ ಅಂತ್ಯದವರೆಗೆ 29.91 ಲಕ್ಷ ಪರೋಪಜೀವಿಗಳನ್ನು ಸದರಿಯವರಿಂದ ಪಡೆದು (100ಕ್ಕೆ ರೂ. 6.00ರಂತೆ) ಇಲಾಖೆಯ ಸಿಬ್ಬಂದಿಯ ಮುಖಾಂತರ 1058ರೈತರ ತೆಂಗಿನ ತೋಟಗಳಲ್ಲಿ ಉಚಿತವಾಗಿ ಬಿಡುಗಡೆ ಮಾಡಲಾಗಿದೆ.

ಇ) ಕರ್ನಾಟಕ ರಾಜ್ಯದಲ್ಲಿ ವಿವಿಧ ಜಿಲ್ಲೆಗಳಲ್ಲಿ ತೆಂಗಿನ ಕಪ್ಪು ತಲೆ ಹುಳು ಭಾದೆಯಿರುವ ವಿಸ್ತೀರ್ಣ ಕೆಳಕಂಡಂತೆ ಇದೆ.

ಕ್ರ.ಸಂ	ಜಿಲ್ಲೆಯ ಹೆಸರು	ಕೀಟಭಾದೆಗೊಳಗಾದ ವಿಸ್ತೀರ್ಣ(ಎಕರೆಗಳಲ್ಲಿ)
1.	ಬೆಂಗಳೂರು (ನಗರ)	1283
2.	ಬೆಂಗಳೂರು (ಗ್ರಾಮ)	567
3.	ತುಮಕೂರು	2800
4.	ಕೋಲಾರ	200
5.	ಚಿತ್ರದುರ್ಗ	650
6.	ಶಿವಮೊಗ್ಗ	1100
7.	ಚಿಕ್ಕಮಗಳೂರು	800
8.	ಮೈಸೂರು	2150
9.	ಮಂಡ್ಯ	1867
10.	ದಕ್ಷಿಣ ಕನ್ನಡ	1233
11.	ಉತ್ತರ ಕನ್ನಡ	200
12.	ಹಾಸನ	1583
	ಒಟ್ಟು	14433

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಕಲ್ಪವೃಕ್ಷ ಎಂದು ಹೆಸರು ಪಡೆದಿರತಕ್ಕಂಥ ತೆಂಗು ಇವತ್ತು ಕರಿ ತಲೆ ಹುಳುವಿನ ರೋಗದಿಂದ ನಾಶದ ಅಂಚಿಗೆ ಹೋಗುತ್ತಿದೆ. ಒಂದು ಕಾಲದಲ್ಲಿ ಅದರ ಬಗ್ಗೆ ಗಾದೆ ಕೂಡ ಇತ್ತು,

'ಆರು ವರ್ಷ ನನ್ನನ್ನು ಸಾಕು, ನೂರು ವರ್ಷ ನಿನ್ನನ್ನು ಸಾಕುತ್ತೇನೆ' ಎಂದು ಹೇಳಿ ಈ ತೆಂಗಿನ ಬಗ್ಗೆ ಒಂದು ಇತಿಹಾಸ ಇದೆ. ಇವತ್ತು ಆ ತೆಂಗು ನಾಶವಾಗತಕ್ಕಂಥ ಪರಿಸ್ಥಿತಿಗೆ ಹೋಗಿದೆ. ಚಾಮರಾಜನಗರ ನಮ್ಮ ಒಂದು ತಾಲ್ಲೂಕಿನೊಂದರಲ್ಲೇ ಹೆಚ್ಚು ಕಡಿಮೆ ಐವತ್ತು ಸಾವಿರ ಮರಗಳಿಗೆ ಈ ಒಂದು ರೋಗ ತಗುಲಿದೆ. ನಮ್ಮ ಇಡೀ ಕರ್ನಾಟಕದ ಉದ್ದಗಲಕ್ಕೂ ಈ ರೋಗ ಬಹಳ ವಿಪರೀತವಾಗಿ ತಗಲುತ್ತಿದೆ. ಈ ರೋಗವನ್ನು ತಡೆಗಟ್ಟುವುದಕ್ಕೆ ಸರ್ಕಾರ ಪರಿಣಾಮಕಾರಿಯಾಗಿ ಹಾಗೆ ಪ್ರಾಮಾಣಿಕವಾದಂಥ ವಿನು ಕ್ರಮವನ್ನು ತಾವು ಕೈಗೊಂಡಿದ್ದೀರಿ ಎಂದು ದಯವಿಟ್ಟು ತಾವು ಹೇಳಬೇಕು. ಇಡೀ ಕರ್ನಾಟಕದ ಯಾವ್ಯಾವ ಮೂಲೆಯಲ್ಲಿ ಎಷ್ಟೆಷ್ಟು ಆಗಿದೆ, ಇದನ್ನು ನಿಲ್ಲಿಸುವುದಕ್ಕೆ ಪರಿಣಾಮಕಾರಿಯಾದ ಕ್ರಮವೇನು ಎಂದು ದಯವಿಟ್ಟು ಹೇಳಬೇಕು.

ಶ್ರೀ ಎ. ಕೃಷ್ಣಪ್ಪ : ಮಾನ್ಯ ಅಧ್ಯಕ್ಷರೇ, ಒಟ್ಟು ಇರುವಂಥ ವಿಸ್ತೀರ್ಣ 7,35,146 ಎಕರೆ ಪೈಕಿ ನಮ್ಮ ಇಲಾಖೆಗೆ ಸಿಕ್ಕಿರುವಂಥ ಮಾಹಿತಿಗಳ ಪ್ರಕಾರ 14,443 ಎಕರೆಗಳಲ್ಲಿ ಈ ರೋಗ ತಗಲಿದೆ ಎಂದು ಹೇಳಿದ್ದಾರೆ. ಅದನ್ನು ನಿವಾರಣೆ ಮಾಡಬೇಕು ಎಂದು ಹೇಳಿ ನಮ್ಮ ಇಲಾಖೆಯ ವತಿಯಿಂದ ಇದುವರೆಗೂ ಸುಮಾರು ಎಂಟು ಲಕ್ಷ ರೂಪಾಯಿಗಳನ್ನೂ ಒಂದು ಹಂತದಲ್ಲಿ ಖರ್ಚು ಮಾಡುವುದರ ಮುಖೇನ 2,622 ಲೀಟರ್ ಮದ್ದನ್ನು ಈಗಾಗಲೇ ನಾವು ರೈತರಿಗೆ ಕೊಟ್ಟಿದ್ದೇವೆ. ಹಾಗಾಗಿ ಇದರ ಬಗ್ಗೆ ಕ್ರಮ ತೆಗೆದುಕೊಂಡಿಲ್ಲ ಎಂದಲ್ಲ? ಕ್ರಮ ತೆಗೆದುಕೊಂಡಿದ್ದೇವೆ. ಚಾಮರಾಜನಗರಕ್ಕೆ ಒಳಪಟ್ಟಂತೆ ಹೇಳಬೇಕಾದರೆ ಅಲ್ಲಿರುವಂಥ 11,721 ಎಕರೆಗಳ ಜಮೀನಿನ ಪೈಕಿ 657 ಎಕರೆಗೆ ಈ ಖಾಯಿಲೆ ಬಂದಿದ್ದು ಒಟ್ಟು 39,461 ತೆಂಗಿನ ಗಿಡಗಳಿಗೆ ಈ ರೋಗ ತಗುಲಿದೆ ಎಂದು ನಮ್ಮಲ್ಲಿ ಮಾಹಿತಿ ಇದೆ. ಸನ್ಮಾನ್ಯ ಸದಸ್ಯರು ಈ ವಿಚಾರದಲ್ಲಿ ನನಗೆ ಒಂದು ಪತ್ರವನ್ನು ಕೂಡ ಬರೆದಿದ್ದರು. ಪತ್ರವನ್ನು ಬರೆದಾಗ ಅದಕ್ಕೆ ಕೂಡಲೇ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳಿ ನಾವು ಸುಮಾರು 300 ಲೀಟರ್ ಔಷಧಿಯನ್ನು ಚಾಮರಾಜನಗರ ತಾಲ್ಲೂಕಿಗೆ ರವಾನೆ ಮಾಡಿ ಅದನ್ನು ಸಿಂಪರಣೆ ಮಾಡಿಸಿದ್ದೇವೆ. ಮತ್ತೆ ಎರಡನೆಯ ಹಂತದಲ್ಲೂ ಕೂಡ ತಾವು ಕಾಗದವನ್ನು ಬರೆದಿದ್ದೀರಿ. ಇದು ಇನ್ನು ಬಹಳ ಕಡೆಗೆ ಹರಡುತ್ತಿದೆ. ನೀವು ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳಿ. ಈಗ ಎರಡನೆಯ ಹಂತಕ್ಕೂ ಕೂಡ ಇಲಾಖೆಯ ವತಿಯಿಂದ ನಾವು ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಮತ್ತೆ ಒಂದು ನಿಯೋಗವನ್ನು ಕೂಡ ಯಾರು ಹಿರಿಯ ಅಧಿಕಾರಿಗಳು ವಿಜ್ಞಾನಿಗಳು ಇದ್ದಾರೆ, ಆ ವಿಜ್ಞಾನಿಗಳ ತಂಡ ದೇವರಾಜ್ ಕುಮಾರ್, ಮತ್ತೆ ಸಿದ್ಧಪ್ಪರಾಜು, ಮತ್ತೆ ಪಟಾಲಪ್ಪ ಎಂದು ಹೇಳಿ ಈ ಅಧಿಕಾರಿಗಳನ್ನು ಕೂಡ ನಾವು ಚಾಮರಾಜನಗರಕ್ಕೆ ಇನ್ನು ಮೂರು-ನಾಲ್ಕು ದಿವಸದಲ್ಲಿ ಕಳುಹಿಸುತ್ತಿದ್ದೇವೆ. ಮಾನ್ಯ ಅಧ್ಯಕ್ಷರೇ ಅವರು ಹೇಳಿದ್ದುದು ಸತ್ಯ. ಯಾವತ್ತು ಯಾವ ತಾಲ್ಲೂಕಿನಲ್ಲಿ ಯಾವ ಜಿಲ್ಲೆಯಲ್ಲಿ ರೋಗ ಹರಡುತ್ತದೆ ಎಂದು ಹೇಳಿ ನಮಗೆ ಮುನ್ಸೂಚನೆಗಳು ಇರುವುದಿಲ್ಲ.

ಆದರೆ, ಈ ರೀತಿಯಾದ ವರದಿಗಳು ಬಂದ ಹಾಗೆಲ್ಲಾ ಅದನ್ನು ನಿಯಂತ್ರಿಸುವುದಕ್ಕೆ ನಾವು ಸಾಧ್ಯವಾದ ಕ್ರಮಗಳನ್ನು ಕೈಗೊಂಡಿದ್ದೇವೆ. ಇದಕ್ಕಾಗಿ ಇದುವರೆವಿಗೂ 8 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆಂಬ ಮಾತನ್ನು ತಿಳಿಸುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ತಮ್ಮ ಜಮೀನುಗಳನ್ನು ಒತ್ತೆ ಇಟ್ಟು ಬ್ಯಾಂಕಿನಲ್ಲಿ ಸಾಲ ತೆಗೆದುಕೊಂಡು ರೈತರು ತೆಂಗನ್ನು ಬೆಳೆಯುತ್ತಿದ್ದಾರೆ. ಕಪ್ಪುತಲೆ ಹುಳುಗಳ ಕಾಟದಿಂದ ತೆಗೆದು ನಾಶವಾಗುವ ಪರಿಸ್ಥಿತಿ ಬಂದಾಗ ರೈತರು ಬ್ಯಾಂಕಿನಿಂದ ಈಗಾಗಲೇ ಪಡೆದುಕೊಂಡಿರತಕ್ಕ ಸಾಲವನ್ನು ತೀರಿಸುವುದಕ್ಕೆ ಸರ್ಕಾರ ಅವರಿಗೇನಾದರೂ ಹಣ ಕೊಡುತ್ತದೆಯೆ? ಸಬ್ಸಿಡಿ ಕೊಡುತ್ತದೆಯೇ? ಎಂಬುದನ್ನು ಸ್ಪಷ್ಟಪಡಿಸಬೇಕು. ಕಪ್ಪುತಲೆ

ಹುಳುಗಳ ಕಾಟ ರಾಜ್ಯಾದ್ಯಂತ ಪರಿಣಮಿಸಿದೆ. ಇದನ್ನು ತಪ್ಪಿಸಲು ಬೇರೊಂದು ಔಷಧಿ ಕೊಡುತ್ತೇವೆಂದು ಹೇಳುತ್ತಿಲ್ಲ, ಬದಲಾಗಿ ಈ ಹುಳುಗಳ ಕಾಟವನ್ನು ಹೋಗಲಾಡಿಸುವುದಕ್ಕೆ ಮತ್ತೊಂದು ಜಾತಿಯ ಕ್ರಿಮಿಗಳನ್ನು ಬಿಡುತ್ತಿದ್ದಾರೆ. ಆ ಕ್ರಿಮಿಗಳನ್ನು ತಯಾರಿಸುತ್ತಿದ್ದಾರೆ. ಇದರ ಬಗ್ಗೆ ಸರಿಯಾದ ವ್ಯವಸ್ಥೆಯಾಗಿಲ್ಲ. ಈ ಪರಿಸ್ಥಿತಿಯಲ್ಲಿ ತೆಂಗು ಬೆಳೆಯನ್ನು ಬೆಳಿಯಬೇಕೆ? ಅಥವಾ ಬಿಡಬೇಕೆ? ಎಂಬ ಪ್ರಶ್ನೆಗೆ ರೈತರು ಬಂದಿದ್ದಾರೆ. ಆದುದರಿಂದ, ಕಪ್ಪುತಲೆ ಹುಳುಗಳ ನಿವಾರಣೆಗಾಗಿ ಬೇರೊಂದು ಹುಳುಗಳನ್ನು ಬಿಡುವುದಾಗಲಿ ಅಥವಾ ಔಷಧಿಯನ್ನು ಇಂಜೆಕ್ಟ್ ಮಾಡುವುದನ್ನು ಬಿಟ್ಟು ಬೇರೆ ಯಾವುದಾದರೂ ವ್ಯವಸ್ಥೆಯಿದೆಯೇ? ಮತ್ತು ಬ್ಯಾಂಕ್ ಸಾಲ ತೀರಿಸುವುದಕ್ಕೆ ಏನು ಕ್ರಮ ಕೈಗೊಳ್ಳುತ್ತೀರಿ? ಎಂಬ ಬಗ್ಗೆ ತಾವು ಸ್ಪಷ್ಟಪಡಿಸಬೇಕು.

ಶ್ರೀ ಎ. ಕೃಷ್ಣಪ್ಪ : ತೆಂಗು ಬೆಳೆ ನಷ್ಟಕ್ಕೆ ಪರಿಹಾರ ಕೊಡುವಂಥ ಕಾರ್ಯಕ್ರಮ ಸರ್ಕಾರದಲ್ಲಿ ಸದ್ಯಕ್ಕಿಲ್ಲ. ಇಲ್ಲಿ ನೀತಿಯ ಪ್ರಶ್ನೆ ಉದ್ಭವವಾಗಿರುವುದರಿಂದ ಮಾನ್ಯ ಸದಸ್ಯರು ಬಹಳ ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ, ಇದರ ಬಗ್ಗೆ ಸರ್ಕಾರದ ಮಟ್ಟದಲ್ಲಿ ಸಮಾಲೋಚಿಸಬೇಕಾಗಿದೆ. ಕಳೆದ ವರ್ಷದ ಸೆಪ್ಟೆಂಬರ್ ತಿಂಗಳಿನಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ತೆಂಗು ಬೆಳೆಗೆ ತಗುಲಿರುವ ರೋಗದ ಬಗ್ಗೆ ಅಧ್ಯಯನ ಮಾಡಲು ತಜ್ಞರಾದ ಡಾ: ರೆಡ್ಡಿಯವರ ನೇತೃತ್ವದಲ್ಲಿ ಒಂದು ತಂಡವನ್ನು ಕಳುಹಿಸಿಕೊಟ್ಟಿದ್ದೇವೆ. ಹಾಗಾಗಿ ಇವೊತ್ತು ನಮ್ಮ ರಾಜ್ಯದಲ್ಲಿರುವಂಥ ವಿಜ್ಞಾನಿಗಳು ಹೊರಗಡೆ ಇರುವಂಥ ವಿಜ್ಞಾನಿಗಳ ಸಹಾಯ ಪಡೆದು ನಮ್ಮ ಇಲಾಖಾ ವತಿಯಿಂದ ಈ ಬೆಳೆಗೆ ತಗುಲಿರುವಂಥ ರೋಗವನ್ನು ಸಂಪೂರ್ಣವಾಗಿ ನಿಯಂತ್ರಿಸುವುದಕ್ಕೆ ಸಾಧ್ಯವೇ? ಎಂಬುದರ ಬಗ್ಗೆ ತಜ್ಞರು ಆ ಕೆಲಸದಲ್ಲಿ ನಿರತರಾಗಿದ್ದಾರೆ. ನಿಮ್ಮ ತಾಲ್ಲೂಕಿಗೂ ಕೂಡ ವಿಜ್ಞಾನಿಗಳ ಒಂದು ಅಧ್ಯಯನ ತಂಡವನ್ನು ಕಳುಹಿಸಿಕೊಡುತ್ತಿದ್ದೇನೆ.

ರಸಗೊಬ್ಬರಕ್ಕೆ ಸಹಾಯ ಧನ

21 - ಶ್ರೀ ಎ.ಟಿ. ರಾಮಸ್ವಾಮಿ (ಅರಕಲಗೂಡು) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೇ?

ಅ) 1993-94 ನೇ ಸಾಲಿನಲ್ಲಿ ರಸಗೊಬ್ಬರ ಸಹಾಯ ಧನಕ್ಕಾಗಿ ನಿಗಧಿ ಪಡಿಸಿರುವ ಹಣ ಎಷ್ಟು?

ಆ) ನಿಗಧಿ ಪಡಿಸಿರುವ ಹಣದಲ್ಲಿ ಎಷ್ಟು ಹಣವನ್ನು ರೈತರು ಸಹಾಯ ಧನಕ್ಕಾಗಿ ಉಪಯೋಗಿಸಿ ಕೊಂಡಿರುತ್ತಾರೆ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ (ಕೃಷಿ ಸಚಿವರು)

ಅ) ಎಲ್ಲಾ ರೈತರಿಗೆ ಅನ್ವಯವಾಗುವ ರಸಗೊಬ್ಬರದ ಬೆಲೆ ರಿಯಾಯತಿ ಯೋಜನೆಗೆ 93-94ನೇ ಸಾಲಿನಲ್ಲಿ ಮುಂಗಾರಿಗೆ 41.723 ಕೋಟಿ ರೂ.ಗಳು ಮತ್ತು ಹಿಂಗಾರು ಮತ್ತು ಬೇಸಿಗೆ ಹಂಗಾಮಿಗೆ 21.302 ಕೋಟಿ ರೂ.ಗಳು ಹೀಗೆ ಒಟ್ಟು 63.025 ಕೋಟಿ ರೂ.ಗಳನ್ನು ನಿಗಧಿ ಪಡಿಸಲಾಗಿದೆ. ಅಲ್ಲದೆ ಈ ಸಾಲಿನಲ್ಲಿ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ರೂಪಿಸಿರುವ ರಸಗೊಬ್ಬರ ಸಬ್ಸಿಡಿ ಯೋಜನೆಗೆ 27.50 ಕೋಟಿ ರೂ.ಗಳನ್ನು ನಿಗಧಿಪಡಿಸಲಾಗಿದೆ.

ಆ) ಎಲ್ಲಾ ರೈತರಿಗೂ ಅನ್ವಯವಾಗುವ ರಸಗೊಬ್ಬರ ಬೆಲೆ ರಿಯಾಯಿತಿ ಯೋಜನೆಯ ಮುಂಗಾರು ಹಂಗಾಮಿನಲ್ಲಿ 28.79 ಕೋಟಿ ರೂ.ಗಳು ಮತ್ತು ಹಿಂಗಾರು : ಬೇಸಿಗೆ ಹಂಗಾಮಿನಲ್ಲಿ ಅಕ್ಟೋಬರ್ನಿಂದ ಡಿಸೆಂಬರ್ನಿಂದ 1993ರ ಅಂತ್ಯದವರೆಗೆ 5.81ಕೋಟಿ ರೂ.ಗಳು ಹೀಗೆ ಒಟ್ಟು 34.60ಕೋಟಿ ರೂ.ಗಳು ಉಪಯೋಗವಾಗುರುತ್ತದೆ.

ಸಣ್ಣ ಮತ್ತು ಅತಿಸಣ್ಣ ರೈತರ ರಸಗೊಬ್ಬರ ಸಬ್ಸಿಡಿ ಯೋಜನೆಯಲ್ಲಿ ಡಿಸೆಂಬರ್ 1993 ರ ಅಂತ್ಯದವರೆಗೆ 11.62 ಕೋಟಿ ರೂ.ಗಳ ಉಪಯೋಗವಾಗಿರುತ್ತದೆ.